**ಇಂದು ದಿನಾಂಕ: 03.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 1, 2, 6 ನೇ ಪ್ರತಿವಾದಿ ಪರ ವಕೀಲರಿಂದಃ**

ನಿಪಿ. 10ರ ಕ್ರಯದ ಕರಾರು ಪತ್ರವನ್ನು ದಸ್ತವಾಜು ಬರಹಗಾರರಾದ ವಿಜೇಯೇಂದ್ರ ರವರ ಕಚೇರಿಯಲ್ಲಿ ಸಿದ್ಧಪಡಿಸಲಾಯಿತು. ಕ್ರಯದ ಒಪ್ಪಂದ ಪತ್ರವನ್ನು ವಿಜೇಯೇಂದ್ರ ರವರೇ ಪೂರ್ತಿಯಾಗಿ ಸಿದ್ಧಪಡಿಸಿದ್ದಾರೆ. ತಾಲ್ಲೂಕು ಕಚೇರಿ ಎದುರು ವಿಜೇಯೇಂದ್ರ ರವರ ಕಚೇರಿ ಇದೆ. ವಿಜೇಯೇಂದ್ರ ಕ್ರಯದ ಕರಾರು ಪತ್ರವನ್ನು ಸಿದ್ಧಪಡಿಸಿದ ನಂತರ ಅದನ್ನು ನೊಂದಾಯಿಸಬೇಕು ಎಂದು ವಾದಿಗಳಾದ ನಾವಾಗಲೀ ಅಥವಾ ಪ್ರತಿವಾದಿ 2 ರಿಂದ 5 ರವರಾಗಲೀ ಕೇಳಿಲ್ಲ. ಸಾಕ್ಷಿಯಾದ ಬಿ.ಎಸ್ ಮಂಜುನಾಥ ರವರು ಇದ್ದರು ವಾದಿಗಳಾದ ನಾವು, ಪ್ರತಿವಾದಿ 2 ರಿಂದ 6 ಹಾಗೂ ಸಾಕ್ಷಿಗಳನ್ನು ಹೊರತು ಪಡಿಸಿ ಬೇರೆಯವರು ಇದ್ದರು ಅವರು ನಮಗೆ ಪರಿಚಯ ಇರಲಿಲ್ಲ. ಕ್ರಯದ ಕರಾರು ಪತ್ರವನ್ನು ನೊಂದಾಯಿಸಿಕೊಡಬೇಕು ಎಂದು ವಿಜೇಯೇಂದ್ರ ರವರನ್ನು ಒತ್ತಾಯಿಸಲು ತೊಂದರೆ ಇತ್ತಾ ಎಂದರೆ ನಮಗೆ ಹಣ ಬರುತ್ತದಲ್ಲ ಎಂದು ತಿಳಿದು ಒತ್ತಾಯಿಸಿದ್ದೇವು. ದಾವ ಆಸ್ತಿಯ ಸಂಬಂಧ 1ನೇ ಪತಿವಾದಿಗೆ ನಾವು ಕ್ರಯಪತ್ರ ನೊಂದಾಯಿಸಿಕೊಟ್ಟಿದ್ದೇವೆ ಎಂದರೆ ಸರಿ. ಕ್ರಯಪತ್ರದಲ್ಲಿ ಬರೆದಿರುವ ವಿಷಯಗಳನ್ನು ತಿಳಿದು ವಾದಿಗಳಾದ ನಾವು ಸಹಿ ಮಾಡಿದ್ದೇವೆ ಎಂದರೆ ಸರಿ. ಕ್ರಯಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿ ದಾವ ಆಸ್ತಿಯ ಖಾತೆಯನ್ನು ತನ್ನ ಹೆಸರಿಗೆ ಬದಲಾಯಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ 1/12, 1/14, 1/15, 1/13 ಖಾತೆ ಆಗಿರುತ್ತದೆ. ಈ ಜಮೀನುಗಳೆಲ್ಲ ಪಿರಿಯಾಪಟ್ಟಣ ತಾಲ್ಲೂಕು ಕಸಬಾ ಹೋಬಳಿ, ಚೌಡೇನಹಳ್ಳಿಗೆ ಸೇರಿದೆ ಎಂದರೆ ಸರಿ. ಈಗ ಹೇಳಿದ ಎಲ್ಲಾ ಜಮೀನುಗಳ ಹಿಂದಿನ ಸರ್ವೇ ನಂಬರ್ 1/7 ಆಗಿತ್ತು ಎಂದರೆ ಸರಿ. ಅವುಗಳ ಒಟ್ಟು ವಿಸ್ತೀರ್ಣ 1 ಎಕರೆ 20 ಗುಂಟೆ ಎಂದರೆ ಸರಿಯಲ್ಲ. ಆದರೆ 2 ಎಕರೆ 10 ಗುಂಟೆ ಆಗಿತ್ತು. ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಹಳೆಯ ಸರ್ವೇ ನಂ. 1/7 ಹೊಸದಾಗಿ 1/12, 1/14, 1/15, 1/13 ಆಗಿದೆ ಎಂಬುದರ ಬಗ್ಗೆ ದಾವೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ಈ ಎಲ್ಲಾ ಜಮೀನುಗಳ ಪೂರ್ವ ದಿಕ್ಕಿಗೆ

ಬಿ.ಎಂ ರೋಡ್, ಪಶ್ಚಿಮಕ್ಕೆ ಸಣ್ಣಸ್ವಾಮಿ ಜಮೀನು, ಉತ್ತರಕ್ಕೆ ಚೌಡನೇಹಳ್ಳಿ ಕೆರೆ ಮತ್ತು ದಕ್ಷಿಣಕ್ಕೆ ನಲ್ಲೂರಯ್ಯನವರ ಉಳಿಕೆ ಜಮೀನು ಇದೆ ಎಂದರೆ ಸರಿ. 1 ನೇ ಪ್ರತಿವಾದಿ ಜಮೀನು ಖರೀದಿಸಿದ ನಂತರ ಅದೇ ಜಮೀನಿನಲ್ಲಿ ಅವರ ಪತ್ನಿಯ ಹೆಸರಿನಲ್ಲಿ ಪೆಟ್ರೋಲ್ ಬಂಕ್ ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ ಪೆಟ್ರೋಲ್ ಬಂಕ್ ಸುಮಾರು 18 ಗುಂಟೆ ಇದೆ ಎಂದರೆ ಗೊತ್ತಿಲ್ಲ. ಸದರಿ ಪೆಟ್ರೋಲ್ ಬಂಕ್ ಬಿ.ಎಂ. ರಸ್ತೆಗೆ ಹೊಂದಿಕೊಂಡತೆ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿ ಭಾರತ್ ಪೆಟ್ರೋಲಿಯಮ್ ಕಾರ್ಪೋರೇಷನ್ ಕಂಪನಿ ಜೊತೆಗೆ 19.11.2010 ರ ನೊಂದಣಿ ಬಾಡಿಗೆ ಕರಾರು ನೊಂದಣಿ ಮಾಡಿಕೊಂಡು ಒಪ್ಪಂದ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2. ತಾಯಮ್ಮ ಎಂದರೆ ನನ್ನ ಸೋದರ ಅತ್ತೆ. ದಾವ ಆಸ್ತಿಗಳ ಸಂಬಂಧ 9 ನೇ ಪ್ರತಿವಾದಿ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಪಿರಿಯಾಪಟ್ಟಣದ ಸಿವಿಲ್ ನ್ಯಾಯಾಲಯದಲ್ಲಿ 103/2011 ರಲ್ಲಿ ದಾವೆ ನನ್ನ ಸೋದರ ಅತ್ತೆ ಮೂಲಕ ಕೇಸ್ ಹಾಕಿಸಿದ್ದೇವು ಎಂದರೆ ಸರಿಯಲ್ಲ. ಆ ಕೇಸ್ ನಲ್ಲಿ ನಾನು, 1 ನೇ ವಾದಿ, ರಂಗ, ಈ ಕೇಸಿನ 2 ನೇ ಪ್ರತಿವಾದಿಗಳಾಗಿದ್ದೇವು. ಓ. ಎಸ್. 103/2011 ವಜಾ ಆಯಿತು ಎಂದರೆ ಸರಿ. ಸಾಕ್ಷಿಯು ಸ್ವತಃ ಹೇಳುವುದು ಏನೇಂದರೆ Dismissed for non prosecution ಆಗಿದೆ. ಆ ಕೇಸ್ ವಜಾ ಆದ ಕಾರಣ ಪ್ರತಿವಾದಿ 1, 2 ಮತ್ತು 6 ರವರ ವಿರುದ್ಧ ಈ ಸುಳ್ಳು ಕೇಸ್ ಹಾಕೀದ್ದೇವೆ ಎಂದರೆ ಸರಿಯಲ್ಲ. ನಿಪಿ. 10 ರಂತೆ ಯಾವುದೇ ಕರಾರುಪತ್ರ ಆಗಿಲ್ಲದೇ ಇದ್ದರೂ ಸಹ 1 ನೇ ಪ್ರತಿವಾದಿಯಿಂದ ದಾವ ಆಸ್ತಿಯನ್ನು ಹೇಗಾದರೂ ಮಾಡಿ ಕಬಳಿಸಬೇಕೆಂಬ ಉದ್ದೇಶದಿಂದ ಅದನ್ನು ಸೃಷ್ಠಿಮಾಡಿಕೊಂಡಿದ್ದೇವೆ ಎಂದರೆ ಸುಳ್ಳು. ನಿಪಿ. 10 ರ ಮೂಲ ದಾಖಲೆ ಅಸ್ತಿತ್ವದಲ್ಲೇ ಇರಲಿಲ್ಲ ಆದರೂ ಸಹ ನಿಪಿ. 10 ರ ದಾಖಲೆಯನ್ನು ಈ ಕೇಸಿಗೊಸ್ಕರ ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಸ್ವಲ್ಪ ಭಾಗವನ್ನು ಅಂದರೆ ಪೆಟ್ರೋಲ್ ಬಂಕ್ ಇರುವ ಜಾಗವನ್ನು 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪೆಟ್ರೋಲ್ ಬಂಕ್ ಮತ್ತು ಅದರ ಜಾಗ 6 ನೇ ಪ್ರತಿವಾದಿಗೆ ಮಾಲಿಕತ್ವ ಮತ್ತು ಸ್ವಾಧೀನತೆ ಇದೆ ಎಂದರೆ ಸರಿ. 1 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಮಾರಾಟ

ಮಾಡಿರುವುದಲ್ಲದೇ ಇನ್ನೂ ಕೆಲವು ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅವರೆಂದರೆ 7 ನೇಪ್ರತಿವಾದಿಗೆ ಸ್ವಲ್ಪ ಮಾರಾಟ ಮಾಡಿದ್ದಾರೆ. 7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿ ಯಾರ ಸ್ವಾಧೀನದಲ್ಲಿದೆ ಎಂದು ಗೊತ್ತಿಲ್ಲ. ನಿಪಿ. 10 ರಲ್ಲಿ ನಮೂದಿಸಿರುವ ಹಣವನ್ನು 1 ನೇ ಪ್ರತಿವಾದಿ ನಮಗೆ ಕೊಟ್ಟಿಲ್ಲದ ಕಾರಣ ಕ್ರಯಪತ್ರವನ್ನು ರದ್ದು ಗೊಳಿಸಬೇಕೆಂದು ದಾವೆಯಲ್ಲಿ ಕೇಳಿದ್ದೇವೆ. ಸದರಿ ಪರಿಹಾರ ಹೊರತು ಪಡಿಸಿ ಬೇರೆ ಪರಿಹಾರ ಕೇಳಿರುವುದಿಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಲಾದ ಯಾವುದೇ ಪರಿಹಾರ ಪಡೆಯಲು ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ಕಾಣಿಸಿರುವ ಪೂರ್ತಿ ಹಣವನ್ನು ನಾವು ಪಡೆದುಕೊಂಡಿದೇವೆ ಎಂದರೆ ಸರಿಯಲ್ಲ. ನಿಪಿ. 1 ಕ್ರಯಪತ್ರದ ಅಡಿಯಲ್ಲಿ ರೂ. 6,40,000/- ಮಾತ್ರ ಪಡೆದುಕೊಂಡಿದ್ದೇವೆ. ಪ್ರತಿವಾದಿ ಮತ್ತು 1 ಮತ್ತು 6 ರವರ ಜಮೀನನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ವಕೀಲರಿಂದಃ**

ಮುಳುಸೂಗಿಯ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಈ ಕೇಸಿನಲ್ಲಿ 8 ನೇ ಪ್ರತಿವಾದಿ ಆಗಿರುತ್ತಾರೆ. ನನ್ನ ವಾದ ಪತ್ರದಲ್ಲಿ 8 ನೇ ಪ್ರತಿವಾದಿ ವಿಳಾಸವನ್ನು ಕೂಡು ಮಂಗಳೂರು ಶಾಖೆ ಅಂತಲೂ ಬರೆಸಿದ್ದೇನೆ. ಹಳೆಯ ಸರ್ವೇ ನಂ. 1/7 ಹೊಸ ಸರ್ವೇ ನಂ. 1/12, 1/14, 1/15, 1/13 ವ್ಯವಸಾಯದ ಜಮೀನುಗಳಾಗಿದೆ ಎಂದರೆ ಸರಿಯಲ್ಲ. 2 ಎಕರೆ 10 ಗುಂಟೆ 1 ನೇ ಪ್ರತಿವಾದಿ ಹೆಸರಿನಲ್ಲಿ ಕನ್ವರ್ಶನ್ ಆಗಿದೆ. 1 ನೇ ಪ್ರತಿವಾದಿಗೆ ವಾದಿಗಳಾದ ನಾವು ಕ್ರಯಕ್ಕೆ ಕೊಟ್ಟಿದ್ದೇವು. ದಿಃ 18.08.2010 ರಂದು 1 ನೇ ಪ್ರತಿವಾದಿಯ ಹೆಸರಿಗೆ ಅನ್ಯಕ್ರಾಂತ ಆಗಿದೆ. ಅನ್ಯಕ್ರಾಂತ ಆಗಿರುವ ಬಗ್ಗೆ ವಾದಪತ್ರದಲ್ಲಿ ಹೇಳಿದ್ದೇವೆ. 1 ನೇ ಪ್ರತಿವಾದಿ ಎಷ್ಟು ವಿಸ್ತೀರ್ಣದ ಜಮೀನನ್ನು 8 ನೇ ಪ್ರತಿವಾದಿಗೆ ಅಡಮಾನ ಮಾಡಿದ್ದಾನೆ ಎಂದರೆ ಗೊತ್ತಿಲ್ಲ. ನನ್ನ ಪ್ರಕಾರ 1 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಅಡಮಾನ ಮಾಡಿದ್ದಾನೆ. 7 ನೇ ಪ್ರತಿವಾದಿ ದಾವ ಆಸ್ತಿಯನ್ನು 8 ನೇ ಪ್ರತಿವಾದಿಗೆ ಅಡಮಾನ ಮಾಡಿರುವ ಬಗ್ಗೆ ವಾದಪತ್ರದಲ್ಲಿ ಬರೆಸಿಲ್ಲ. ಯಾವುದೇ ಬ್ಯಾಂಕ್ ಒಬ್ಬ ವ್ಯಕ್ತಿಗೆ ಜಮೀನಿನ ಸಾಲ ಕೊಡಬೇಕಾದರೆ ಆ ವ್ಯಕ್ತಿಯ ಹೆಸರಿನಲ್ಲಿರುವ

ದಾಖಲೆಗಳನ್ನು ಪರಿಶೀಲಿಸಿ ಆ ಜಮೀನಿನಲ್ಲಿ ಹಕ್ಕು ಇದ್ದರೆ ಮಾತ್ರ ಸಾಲ ಕೊಡುತ್ತಾರೆ ಎಂದರೆ ಸರಿ. ದಿಃ 22.07.2016 ರಂದು 1 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಅಡಮಾನ ಮಾಡಿಕೊಟ್ಟಿರುತ್ತಾರೆ. ಪ್ರತಿವಾದಿ 1 ರವರು 8 ನೇ ಪ್ರತಿವಾದಿಗೆ ಸಾಲ ಮರುಪಾವತಿ ಮಾಡಿದ್ದಾರೆಯೇ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ 8 ನೇ ಪ್ರತಿವಾದಿಯಿಂದ ಸಾಲ ಪಡೆದಿರುವ ವಿಷಯ 2024 ರಲ್ಲಿ ಹೆಚ್.ಎಂ ಬಾಲಕೃಷ್ಣ ರವರ ಹೆಸರಿನಲ್ಲಿ ಋಣಭಾರ ಪತ್ರ ತೆಗೆದುಕೊಂಡು ನೋಡಿದಾಗ ತಿಳಿಯಿತು. ಋಣಭಾರ ಪತ್ರದ ಪ್ರಕಾರ 1 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಅಡಮಾನ ಮಾಡಿದ್ದಾರೆ. ಋಣಭಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಪ್ರತಿವಾದಿ 7 ಮತ್ತು 8 ರವರನ್ನು ಈ ಕೇಸಿನಲ್ಲಿ ಸಲ್ಲಿಸಬೇಕು ಎಂಬ ಸಲ್ಲಿಸಿದ ಅರ್ಜಿಯಲ್ಲಿ ನನಗೆ ಮೋಸ ಆದ ಕಾರಣ ಅವರನು ಪಕ್ಷಗಾರರನ್ನಾಗಿ ಸೇರಿಸಬೇಕೆಂದು ನಾನು ಹೇಳಿದ್ದೇನೆ. 1 ನೇ ಪ್ರತಿವಾದಿ ಹೆಸರಿನಲ್ಲಿ ದಾಖಲೆಗಳು ಇದ್ದ ಕಾರಣ 8 ನೇ ಪ್ರತಿವಾದಿ ಸಾಲ ಕೊಟ್ಟಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸಾಲ ಕೊಡಬಾರದು ಎಂದು 8 ನೇ ಪ್ರತಿವಾದಿಗೆ ನಾನು ಅರ್ಜಿಕೊಟ್ಟಿರುವುದಿಲ್ಲ ಎಂದರೆ ಆ ಸಮಯದಲ್ಲಿ ನನಗೆ ಗೊತ್ತಿರಲಿಲ್ಲ. ಭೂ ಪರಿವರ್ತನೆ ಆದ ನಂತರ 1 ನೇ ಪ್ರತಿವಾದಿ 8 ನೇ ಪ್ರತಿವಾದಿಯಿಂದ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಸಹಿ/–**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**